**ನನ್ನ ಸ್ವಾತಂತ್ರ್ಯ**



## ಸ್ವಾತಂತ್ರ್ಯದಿಂದ ಹಿಮ್ಮುಖ ಚಲನೆ

ಸ್ವಾತಂತ್ರ್ಯ ಅಂದರೆ ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ಏನು ಹೇಳುತ್ತದೆಯೋ ಅದೆಲ್ಲವನ್ನೂ ಒದಗಿಸಿಕೊಡುವ ವ್ಯವಸ್ಥೆ ಅಂತ ನನಗೆ ಅನಿಸುತ್ತದೆ. ಅದು ಪ್ರತಿಯೊಬ್ಬರಿಗೂ ಘನತೆಯ ಬದುಕನ್ನು ಕಲ್ಪಿಸುವ ಆಶಯವನ್ನು ಹೊಂದಿದೆ. ಎಲ್ಲ ಹಂತ ಮತ್ತು ಕ್ಷೇತ್ರದಲ್ಲಿ ಸಮಾನ ಅವಕಾಶ ನೀಡುವುದೇ ಸ್ವಾತಂತ್ರ್ಯ. 'ಸಮಾನತೆ ಇಲ್ಲದ ಸ್ವಾತಂತ್ರ್ಯ ಅರ್ಥಹೀನ' ಎಂದು ಅಂಬೇಡ್ಕರ್ ಹೇಳುತ್ತಾರೆ. ಇವತ್ತಿನ ಸಂದರ್ಭವನ್ನು ನೋಡಿದರೆ ಸ್ವಾತಂತ್ರ್ಯ ಎನ್ನುವುದು ತಾಂತ್ರಿಕವಾಗಿ ಇದೆ. ವಾಸ್ತವದಲ್ಲಿ ಅದರ ಸತ್ವ ಸಾಕಾರಗೊಂಡಿಲ್ಲ. ಇವತ್ತಿನ ಸನ್ನಿವೇಶ ಹಿಮ್ಮುಖವಾಗಿ ಹೋಗುತ್ತಿದ್ದೇವೆ ಎಂದೆನಿಸುತ್ತದೆ.

ಸ್ವಾತ್ರಂತ್ರ್ಯವನ್ನು ಜನಸಾಮಾನ್ಯರಿಗೆ ಕಲ್ಪಿಸಲು 1947ರಿಂದಲೂ ಜನಪರ ಚಳವಳಿಗಳು ಹೋರಾಟವನ್ನು ರೂಪಿಸುತ್ತಲೇ ಬಂದಿವೆ. ಆ ನಿಟ್ಟಿನಲ್ಲಿ ದೀರ್ಘ ಪಯಣವೂ ನಡೆದಿದೆ. ಅದೆಲ್ಲ ಸ್ವಾತಂತ್ರ್ಯವನ್ನು ಮತ್ತಷ್ಟು ಇನ್ನಷ್ಟು ಉತ್ತಮಗೊಳಿಸಿದೆ. ಆದರೆ, ಕಳೆದ ಎರಡು ದಶಕಗಳಲ್ಲಿ ನಮ್ಮ ಪಯತ್ನ ಹಿಮ್ಮುಖವಾಗಿದೆಯೇ ಎಂದು ಅನಿಸುತ್ತಿದೆ. ವಿಶೇಷವಾಗಿ ಅವಕಾಶಗಳ ದೃಷ್ಟಿಯಲ್ಲಿ ಸಮಾನತೆ ಕಳೆದುಕೊಳ್ಳುತ್ತಿದ್ದೇವೆ. ಧಾರ್ಮಿಕ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಿರಂತರ ಹಲ್ಲೆ ಆಗುತ್ತಲೇ ಇದೆ. ಹಾಗೆಯೇ ಸಮಾನತೆ ಅನ್ನುವುದು ಶೋಚನೀಯ ಪರಿಸ್ಥಿತಿಯಲ್ಲಿ ಇದೆ. ಬಡವರು ಶ್ರೀಮಂತರ ಅಂತರ ದೊಡ್ಡ ಮಟ್ಟದಲ್ಲಿ ಬೆಳೆಯುತ್ತಿದೆ. ಇದು ಸಂವಿಧಾನದ ಆಶಯಕ್ಕೆ ವಿರೋಧವಾಗಿದೆ. ಶ್ರೀಮಂತ ಮತ್ತು ಬಡವರ ನಡುವಿನ ಅಂತರ 1:10ಕ್ಕಿಂತ ಹೆಚ್ಚಾಗಬಾರದು ಎಂದು ಸಂವಿಧಾನ ಹೇಳುತ್ತೆ. ಆದರೆ ಆ ಅಂತರ ನೂರುಪಟ್ಟು ಹೆಚ್ಚಾಗುತ್ತಿದೆ. ಅದೂ ತೀವ್ರ ವೇಗದಲ್ಲಿ ಹೆಚ್ಚುತ್ತಿದೆ. ಇದು ಸ್ವಾತಂತ್ರ್ಯದಿಂದ ಹಿಮ್ಮುಖ ಚಲನೆಯಂತೆ ಕಾಣುತ್ತಿದೆ. ಇದನ್ನು ನಾವೆಲ್ಲ ಬದಲಿಸಬೇಕು ಎನ್ನುವುದು ನನ್ನ ಅಭಿಪ್ರಾಯ.

**-ಮಲ್ಲಿಗೆ ಸಿರಿಮನೆ,** ಸಾಮಾಜಿಕ ಕಾರ್ಯಕರ್ತೆ

ಬಿಟ್ಟು ಯೋಚಿಸಲೇಬೇಕಾದ ಒತ್ತಡ, ಪ್ರೇರಣೆಗಳು ಮೂಡತೊಡಗಿದವು. ಮೇಲುನೋಟದ ಪ್ರಜ್ಞಾಪೂರ್ವಕ ಪ್ರಯತ್ನವಿಲ್ಲದೆಯೂ ಇಡೀ ಸ್ವಾತಂತ್ರ್ಯ ಚಳವಳಿಯ ಪ್ರಧಾನ ಭಾಷೆ ಒಂದು ಮಟ್ಟದಲ್ಲಾದರೂ ಸಮಾನತೆಯ, ಪ್ರಗತಿಪರ ಭಾಷೆಯಾಗತೊಡಗಿತ್ತು. ಜೊತೆಗೇ, ಒಡಕಿನ, ಮತೀಯತೆಯ, ಸಂಕುಚಿತ ಭಾಷೆಯನ್ನು ಬಳಸುವ ಗುಂಪುಗಳೂ ಇದ್ದವು. ಆದರೂ ಸಾರ್ವಜನಿಕವಾಗಿ ಉದಾರವಾದಿ ಭಾಷೆಯೇ ಹೆಚ್ಚು ಕೇಳಿಬರುತ್ತಿತ್ತು ಎಂಬುದು ಚಳವಳಿಯ ಆ ಕಾಲ ಸೃಷ್ಟಿಸುತ್ತಿದ್ದ ಆರೋಗ್ಯಕರ ಮನಸ್ಥಿತಿಗೆ ಪುರಾವೆ. ಈ ಕಾರಣಗಳಿಂದಾಗಿಯೇ ಚರಿತ್ರೆಕಾರರು, ಭಾರತದ ಸ್ವಾತಂತ್ರ್ಯ ಚಳವಳಿಯ ಸುಧಾರಣಾವಾದಿ ಪ್ರಗತಿಪರ ಚೌಕಟ್ಟನ್ನು ಬೇರಾವ ದೇಶದಲ್ಲಿ ಬೇಕಾದರೂ ಪ್ರಯೋಗಿಸಬಹುದು ಎಂದಿರುವುದು.

ಮೂವತ್ತರ ದಶಕದಲ್ಲಿ ಆಫ್ರಿಕಾ ದೇಶ ಹಾಗೂ ಇನ್ನಿತರ ದೇಶಗಳ ಸ್ವಾತಂತ್ರ್ಯ ಹೋರಾಟಗಳ ಜೊತೆಗೂ ಕಾಂಗ್ರೆಸ್ಸಿನ ವಿದೇಶಾಂಗ ಖಾತೆ ಕೈ ಜೋಡಿಸಿ ವಿಶ್ವಾತ್ಮಕವಾಗಿ ಹಬ್ಬತೊಡಗಿತು. ಸ್ವಾತಂತ್ರ್ಯ ಚಳವಳಿ ಹೀಗೆ ಹಬ್ಬುತ್ತಿದ್ದಾಗ, ಚಳವಳಿಯ ತಾಕತ್ತನ್ನು ಪರೀಕ್ಷಿಸಲೆಂಬಂತೆ ಬ್ರಿಟಿಷ್ ಸರ್ಕಾರ ಉಪ್ಪಿನ ಮೇಲೂ ತೆರಿಗೆ ಹಾಕಿಬಿಟ್ಟಿತು. ಬ್ರಿಟಿಷ್ ಸರ್ಕಾರದ ಆಜ್ಞೆಯನ್ನು ಧಿಕ್ಕರಿಸಿ ತಂತಮ್ಮ ಊರುಗಳ ಹತ್ತಿರದ ಸಮುದ್ರದ ದಂಡೆಗಳಲ್ಲಿ ಹಿಡಿ ಉಪ್ಪು ತಯಾರಿಸುವ ಜನಸಾಮಾನ್ಯರ ಹೋರಾಟ ಸ್ವಾತಂತ್ರ್ಯ ಚಳವಳಿಗೆ ಹೊಸ ದಿಕ್ಕನ್ನೇ ಕೊಟ್ಟಿತು. ಆವರೆಗೆ ಎಂದೂ ಕೇಳರಿಯದ ಪೊಲೀಸ್ ಹಿಂಸೆಯನ್ನು ಎದುರಿಸಿದ ಜನ ಗಾಂಧೀಜಿಯ ಉಪ್ಪಿನ ಸತ್ಯಾಗ್ರಹವನ್ನು ನಿಜವಾದ ಜನತಾ ಹೋರಾಟವಾಗಿಸಿದರು. ಊರೂರುಗಳಲ್ಲಿ ಯುದ್ಧೋಪಾದಿಯಲ್ಲಿ ಚರಕದಿಂದ ನೂಲು ತೆಗೆಯತೊಡಗಿದ ಮಹಿಳೆಯರು ಬ್ರಿಟನ್ನಿನ ಗಿರಣಿಗಳಿಂದ ಭಾರತಕ್ಕೆ ಬಂದು ಬೀಳುತ್ತಿದ್ದ ವಿದೇಶಿ ಬಟ್ಟೆಗಳ ಮಾರುಕಟ್ಟೆಯನ್ನು ಮುಖಾಮುಖಿಯಾದರು. ಸಂಗೀತಗಾರರು, ಕಲಾವಿದರು, ಮೇಷ್ಟ್ರುಗಳು, ವಿದ್ಯಾರ್ಥಿ, ವಿದ್ಯಾರ್ಥಿನಿಯರು, ತಂದೆ ತಾಯಿಗಳು, ಕೂಲಿಕಾರರು, ಕಾರ್ಮಿಕರು, ರೈತರು ಮುಂತಾಗಿ ಎಲ್ಲ ವಲಯಗಳ ಜನ ಒಂದಲ್ಲ ಒಂದು ರೀತಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದರು. 'ಜೈಲ್ ಭರೋ' ಚಳವಳಿ ಜನರ ನಿತ್ಯಬದುಕಿನ ರೂಢಿಯಾಗತೊಡಗಿತು.



ಸಾಂಸ್ಕೃತಿಕ ಕ್ಷೇತ್ರ ತನ್ನ ಆದ್ಯ ಕರ್ತವ್ಯವೆಂಬಂತೆ ಸ್ವಾತಂತ್ರ್ಯ ಚಳವಳಿಯ ಸ್ಪಿರಿಟ್ಟನ್ನು ನಿತ್ಯ ಹಬ್ಬಿಸಿತೊಡಗಿತ್ತು. ಹಾಡುಗಳು, ಕವಿತೆಗಳು, ಹರಿಕತೆಗಳು, ನಾಟಕಗಳು, ಕಾದಂಬರಿಗಳು ಹೀಗೆ ಎಲ್ಲೆಡೆಯಿಂದಲೂ ಸ್ವಾತಂತ್ರ್ಯದ ಕರೆ ಬೆಳಗಿನಿಂದ ಸಂಜೆಯವರೆಗೆ ನಿರಂತರವಾಗಿ ಜನರ ಕಿವಿಯ ಮೇಲೆ ಬೀಳುತ್ತಲೇ ಇತ್ತು. ಹೀಗಾಗಿ ಯಾವ ಸೂಕ್ಷ್ಮ ಜೀವಿಯೂ ಸ್ವಾತಂತ್ರ್ಯದ ಕರೆಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವೇ ಇರಲಿಲ್ಲ! ಕನ್ನಡದ 'ಕುರುಕ್ಷೇತ್ರ' ಕಂಪನಿ ನಾಟಕದಲ್ಲಿ, ದ್ರೌಪದಿಯ ವಸ್ತ್ರಾಪಹರಣವಾದಾಗ, ಆಕೆಗೆ ಕೃಷ್ಣ ಖಾದಿ ಸೀರೆಯನ್ನು ದಯಪಾಲಿಸಿದ್ದನ್ನು ಕಂಡ ಜನ ಥ್ರಿಲ್ಲಾಗುತ್ತಿದ್ದರು. ವೃತ್ತಿರಂಗಭೂಮಿಯ ನಾಟಕಗಳಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟಿಷ್ ಅಧಿಕಾರಿ ಥ್ಯಾಕರೆಗೆ ಸವಾಲೆಸೆದು ಸಿಡಿಯುತ್ತಿದ್ದ ವೈಖರಿ ಕಂಡು ಜನ ಥಿಯೇಟರಿನ ಹೊರಗೂ ಬ್ರಿಟಿಷರ ವಿರುದ್ಧ ಸಿಡಿದು ಬೀಳುತ್ತಿದ್ದರು. ಟಿಪ್ಪೂ ಸುಲ್ತಾನ್ ಬ್ರಿಟಿಷರನ್ನು ಎದುರಿಸಿದ ರೀತಿಯನ್ನು ಮಂಡಿಸುತ್ತಿದ್ದ ಭಾವುಕ ನಾಟಕಗಳು ನೋಡುಗರನ್ನು ಬಡಿದೆಬ್ಬಿಸುತ್ತಿದ್ದವು. ಕಿತ್ತೂರು ಚೆನ್ನಮ್ಮನ ದುರಂತ, ಟಿಪ್ಪೂ ತನ್ನ ಮಕ್ಕಳನ್ನು ಒತ್ತೆಯಿಟ್ಟ ದಾರುಣ ಪ್ರಸಂಗಗಳು ಜನರ ಮನ ಕಲಕುತ್ತಿದ್ದವು. ಇಂಥ ಭಾವತೀವ್ರ ನಾಟಕಗಳು ಬ್ರಿಟಿಷ್ ಶತ್ರುವಿನ ವಿರುದ್ಧ ಹೋರಾಟಕ್ಕಿಳಿಯುವಂತೆ ಜನಸಾಮಾನ್ಯರನ್ನು